# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.**776/ 2021**

ಸಿಡಬ್ಲ್ಯೂ಼ **4**
ಪಿಡಬ್ಲ್ಯೂ಼ **4**

<u>ದಿನಾಂಕಃ **30-11-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

ಸಾಕ್ಷಿಯ ಹೆಸರು - ಶೇಖ್ ಜೀಲಾನಿ

ತಂದೆಯ/ಗಂಡನ ಹೆಸರು - ಮಕ್ತುಮ್ ಅಲಿ

ವಯಸ್ಸು -? **36** ವರ್ಷ

ಉದ್ಯೋಗ - ಆಟೋ ಚಾಲಕ

ವಾಸಸ್ಥಳಃ - ಯಾದಗಿರಿ.

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ದಿನಾಂಕಃ 23.10.2021 ರಂದು ನಾನು ಪೊಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ವರೆಗೆ ಬುಲೋರೋ ವಾಹನವನ್ನು ಜಪ್ತಿಪಡಿಸಿಕೊಂಡಿದ್ದರು. ನನ್ನ ಜೊತೆಗೆ ಮಹ್ಮದ್ ರಫಿಕ್ ಇದ್ದರು. ಸಾಕ್ಷಿಯು **2** ಛಯಾಚಿತ್ರಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಯಾಚಿತ್ರಗಳನ್ನು ಈಗಾಗಲೇ ನಿಪಿ **2** ಮತ್ತು **3** ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ. ರವರು ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಹಿರಿಯ.ಸ.ಸ ರವರಿಂದಃ

ದಿನಾಂಕಃ 22.10.2021 ರಂದು ಬೆಳಗ್ಗೆ 10 ರಿಂದ 11 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿ ಬುಲೋರೋ ಫಿಕ್್ಪ ಗೂಡ್ಸ್ ವಾಹನ ಸಂಖ್ಯೆ ಕೆಎ-**32**-ಸಿ-**9812** ನೇದ್ದನ್ನು ಜಪ್ತಿಪಡಿಸಿಕೊಂಡಿದ್ದರು ಎಂದರೆ ಸರಿ. ನನಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಎಸ್.ಪಿ. ರವರಿಂದಃ</u>

ನಾನು ಆಟೋ ಚಾಲಕನ್ನಾಗಿರುತ್ತೇನೆ. ನಾನು ಶಾಲೆಯನ್ನು ಕಲಿತ್ತಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ಪೂಲೀಸರು ನನಗೆ ಪಂಚನಾಮೆಯಲ್ಲಿ ಬರೆದ ವಿಷಯಗಳನ್ನು ಓದಿ ಹೇಳಿದ್ದರು ನಂತರ ನಾನು ಸಹಿ ಮಾಡಿರುತ್ತೇನೆ. ಬುಲೋರೋ ವಾಹನದ ಮಾಲೀಕರ ಹೆಸರು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳನ್ನು ಪೊಲೀಸರು ನನಗೆ ಓದಿ ಹೇಳುವಾಗ ಬುಲೋರೋ ವಾಹನದ ಮಾಲೀಕ ಮತ್ತು ಚಾಲಕನ ಹೆಸರನ್ನು ನನಗೆ ಹೇಳಿರುವುದಿಲ್ಲ. ಅಪಘಾತವು ಎಲ್ಲಿ ಮತ್ತು ಯಾವಾಗ ಆಯಿತು ಎಂದು ನನಗೆ ವೈಕ್ತಿಯ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೊಲೀಸರು ನನಗೆ ಪೊಲೀಸ್ ಠಾಣೆಗೆ ಪಂಚನಾಮೆ ಮಾಡಲು ಕರೆದಿರುವುದಿಲ್ಲ. ನಾನು ಪೂಲೀಸ್ ಠಾಣೆಗೆ ಹೋದಾಗ ನನ್ನ ಸಮಕ್ಷಮ ಪೊಲೀಸರು ಬುಲೋರೋ ವಾಹನದ ಜಪ್ತಿಪಂಚನಾಮೆಯನ್ನು ಮಾಡಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಜೊತೆಗೆ ಇದ್ದ ಇನ್ನೊಬ್ಬ ಪಂಚನ ಹೆಸರು ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಮಾಡುವಾಗ ಪೊಲೀಸ್ ಪೇದೆ ಇದ್ದರು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ದಿನಾಂಕಃ 22.10.2021 ರಂದು ಬೆಳಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಬುಲೋರೋ ಫಿಕ್್ಪ ಗೂಡ್ಸ್ ವಾಹನ ಸಂಖ್ಯೆ ಕೆಎ-**32**-ಸಿ-**9812** ನೇದ್ದನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡದೇ ಇದ್ದರು ಸಹ ನಾನು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.